**ದಶಕದಲ್ಲೇ ನಗರೀಕರಣ ಶೇ 74ರಷ್ಟು ಏರಿಕೆ**

# ಜೌಗು ಪ್ರದೇಶ ಹೋಯ್ತು– ಎಲ್ಲೆಡೆ ಕಟ್ಟಡ ಬಂತು

2 Sep, 2017 ಪ್ರಜಾವಾಣಿ ವಾರ್ತೆ

ವಿಜ್ಞಾನಿಗಳಾದ ಟಿ.ವಿ.ರಾಮಚಂದ್ರ, ಭರತ್ ಎಚ್.ಐತಾಳ್, ವಿನಯ್ ಎಸ್. ಅವರ ತಂಡವು ಸಿದ್ಧಪಡಿಸಿರುವ 'ನಗರ ಪ್ರದೇಶದ ಪ್ರವಾಹದ ಅಪಾಯಗಳನ್ನು ತಡೆಯಲು ಪರಿಸರ ದೃಷ್ಟಿಕೋನದ ಪರಿಹಾರಗಳು' ಅಧ್ಯಯನ ವರದಿಯು ಜಲಮೂಲಗಳ ಸಂಪರ್ಕ ಜಾಲಗಳು ವೇಗವಾಗಿ ಕಣ್ಮರೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ.




ಜೌಗು ಪ್ರದೇಶ ಹೋಯ್ತು– ಎಲ್ಲೆಡೆ ಕಟ್ಟಡ ಬಂತು

ಬೆಂಗಳೂರು: 'ಕೆ.ಆರ್.ಮಾರುಕಟ್ಟೆ, ಶಾಂತಿನಗರ, ಕೋರಮಂಗಲ ಮೂಲಕ ಬೆಳ್ಳಂದೂರು ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಅಗಲ 60 ಅಡಿಯಿಂದ 28 ಅಡಿಗೆ ಕುಗ್ಗಿದೆ. ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಆದೇಶವನ್ನು ಉಲ್ಲಂಘಿಸಿ ರಾಜಕಾಲುವೆಗಳ ಮೀಸಲು ಪ್ರದೇಶವನ್ನು ಭೂಗಳ್ಳರು ಕಬಳಿಸುತ್ತಿದ್ದಾರೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡ ಬೆಳಕು ಚೆಲ್ಲಿದೆ.

ವಿಜ್ಞಾನಿಗಳಾದ ಟಿ.ವಿ.ರಾಮಚಂದ್ರ, ಭರತ್ ಎಚ್.ಐತಾಳ್, ವಿನಯ್ ಎಸ್. ಅವರ ತಂಡವು ಸಿದ್ಧಪಡಿಸಿರುವ 'ನಗರ ಪ್ರದೇಶದ ಪ್ರವಾಹದ ಅಪಾಯಗಳನ್ನು ತಡೆಯಲು ಪರಿಸರ ದೃಷ್ಟಿಕೋನದ ಪರಿಹಾರಗಳು' ಅಧ್ಯಯನ ವರದಿಯು ಜಲಮೂಲಗಳ ಸಂಪರ್ಕ ಜಾಲಗಳು ವೇಗವಾಗಿ ಕಣ್ಮರೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಬೆಳ್ಳಂದೂರು–ವರ್ತೂರು ಕೆರೆಯ ಕಣಿವೆ ಪ್ರದೇಶದ ರಾಜಕಾಲುವೆ ಅಗಲ ಈ ಹಿಂದೆ 35 ಮೀಟರ್ ಇತ್ತು. ಈಗ ಅದು 8 ಮೀಟರ್ ಆಗಿದೆ. ಈ ಕಣಿವೆ ಪ್ರದೇಶದಲ್ಲಿ 2002ರಲ್ಲಿ ನಗರೀಕರಣ ಶೇ 1.44ರಷ್ಟು ಇದ್ದರೆ, 2016ರ ವೇಳೆಗೆ ಶೇ 74.32ಕ್ಕೆ ಏರಿದೆ. ಅಲ್ಲಿ 2002ರಲ್ಲಿ ಜೌಗು ಪ್ರದೇಶ, ಕೃಷಿ ಹಾಗೂ ಜಲಮೂಲ ಶೇ 98.5ರಷ್ಟಿತ್ತು. ಅದು ಈಗ ಶೇ 25.68ಕ್ಕೆ ಇಳಿದಿದೆ.